<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು</u>

<u>ಪಾಟೀ ಸವಾಲುಃ- ಶ್ರೀ. ಎಸ್.ಎಸ್.ಎನ್. ವಕೀಲರಿಂದ ಆರೋಪಿಯ ಪರವಾಗಿ</u>

9. ದೂರುದಾರರು ಹಾಗೂ ಆರೋಪಿಯ ನಡುವೆ ಆದಂತಹಃ ವ್ಯವಹಾರಕ್ಕೆ ಸಂಬಂಧಪಟ್ಟಂತೆ ನಾನು ಹಾಜರು ಪಡಿಸಿರುವ ದಾಖಲಾತಿಗಳು ಅಲ್ಲದೇ ಬೇರೆ ಯಾವುದೇ ದಾಖಲಾತಿ ಇರುವುದಿಲ್ಲ. ಟ್ರಾನ್ಸ್‌ಪೋರ್ಟರ್ ಕಂಪನಿಯವರಿಗೆ ಪ್ರತ್ಯೇಕವಾದ ಐ.ಡಿ.ಇರುತ್ತದೆ ಎಂದರೆ ಸರಿ. ನನಗೂ ಸಹಃ ಪ್ರತ್ಯೇಕವಾದ ಟ್ರಾನ್ಸ್‌ಪೋರ್ಟರ್ ಐ.ಡಿ. ಇದೆ. ಅದು ಮಹಾಗಣಪತಿ ಟ್ರಾನ್ಸ್‌ಪೋರ್ಟರ್ ಎಂಬ ಹೆಸರಿಗೆ ಇದೆ. ನಿಡಿ 1 ರಲ್ಲಿ ಕಂಡು ಬರುವ ಟ್ರಾನ್ಸ್‌ಪೋರ್ಟರ್ ಐ.ಡಿ. ಹಾಗೂ ನಿಪಿ 14 ರಲ್ಲಿ ಕಂಡು ಬರುವ ಟ್ರಾನ್ಸ್‌ಪೋರ್ಟರ್ ಐ.ಡಿ. ಒಂದು ಇದೆ. ಅದು ನಮ್ಮ ಸಂಸ್ಥೆಗೆ ನೀಡಿರುವ ಟ್ರಾನ್ಸ್‌ಪೋರ್ಟರ್ ಐ.ಡಿ.

10. ನಮ್ಮ ಸಂಸ್ಥೆಯಿಂದ ಟ್ರಾನ್ಸ್‌ಪೋರ್ಟ ಆಗುವ ಲಾರಿಗಳ ನಂಬರ ಅನ್ನು ಬಿಲ್ಟಿಯಲ್ಲಿ ಹಾಕಿರುತ್ತೇವೆ. ವಾಹನ ಸಂಖ್ಯೆ ಎಂಪಿ-09-ಹೆಚ್‌ಹೆಚ್-2247 ರ ಲಾರಿಯನ್ನು ನಾವು ಬಳಕೆ ಮಾಡಿರುತ್ತೇವೆ. ಅದೇ ರೀತಿ ವಾಹನ ಸಂಖ್ಯೆ ಎಂಪಿ-09-ಹೆಚ್‌ಜೆ-0685 ರ ವಾಹನವನ್ನು ನಿಮ್ಮ ಸಂಸ್ಥೆಯಿಂದ ಬಳಕೆ ಮಾಡಿರುವ ವಾಹನ ಎಂದರೆ ಸಾಕ್ಷಿಯು ಆ ಬಗ್ಗೆ ಬಿಲ್ಟಿ ಇದ್ದರೆ ಹೌದು ಎಂದು ಹೇಳುತ್ತಾರೆ. ನಿಪಿ 16 ಬಿಲ್ಟಿ, ಅದರಲ್ಲಿ ಇರುವ ವಾಹನ ಸಂಖ್ಯೆ ಎಂಪಿ-09-ಹೆಚ್‌ಜೆ-0685.

11. ಸರಸ್ವತಿ ಸುಪಾರಿ ಕಂಪನಿಯವರು ಉತ್ತರ ಪ್ರದೇಶಕ್ಕೆ ಡಿಲಿವರಿ ಮಾಡಲು ಅಡಿಕೆ ನೀಡಿದರೆ ಕೆಲವು ಲಾರಿಗಳು 4 ದಿನಗಳಲ್ಲಿ ತಲುಪುತ್ತವೆ, ಕೆಲವು ಲಾರಿಗಳು 6 ದಿನಗಳಲ್ಲಿ ತೆಲಪುತ್ತವೆ. ಬಿಲ್ಟಿಯನ್ನು Cosigner ಹಾಗೂ Consignee ಇಬ್ಬರಿಗೂ ನೀಡುತ್ತೇವೆ. ಒಂದು ಪ್ರತಿ ನಮ್ಮ ಬಳಿ ಇರುತ್ತದೆ. ನಿಪಿ 13, 16, 19, 22, 25 ಮತ್ತು 28 ರಲ್ಲಿ ಸರಕನ್ನು ಸ್ವೀಕರಿಸಿದವರ ಸಹಿ ಇರುವುದಿಲ್ಲ ಏಕೆಂದರೆ ಅವರ ಸಹಿಯನ್ನು ನಾವು ಪಡೆದುಕೊಳ್ಳುವುದಿಲ್ಲ ಬದಲಾಗಿ ಪೋನ್ ಮೂಲಕ ಖಚಿತಪಡಿಸಿಕೊಳ್ಳುತ್ತೇವೆ. ಡಿಲಿವರಿ ಪಡೆದುಕೊಂಡ ನಂತರ ಸ್ವೀಕೃತಿಯನ್ನು ನೀಡುತ್ತಾರೆ ಎಂದರೆ ಸರಿಯಲ್ಲ. ಯಾರು ಸಹಃ ಆ ರೀತಿ ಸರಕನ್ನು ಸ್ವೀಕರಿಸಿದ ಬಗ್ಗೆ ಸ್ವೀಕೃತಿ ನೀಡುವುದಿಲ್ಲ ಏಕೆಂದರೆ ಪೋನ್ ಮೂಲಕ ಖಚಿತಪಡಿಸಿಕೊಳ್ಳುತ್ತಾರೆ. ಸಾಮಾನ್ಯವಾಗಿ ಸರಕನ್ನು ಸ್ವೀಕರಿಸುವವರು ತೀರಸ್ಕರಿಸಿದರೆ ಸ್ವೀಕೃತಿ

ಮಾಡಬೇಕಾದವರು ಡೆಬಿಟ್ ನೋಟನ್ನು ರೈಸ್ ಮಾಡುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ಕಳುಹಿಸಿರುವ ಸರಕುಗಳು ಯಾವುದೇ ತೀರಸ್ಕಾರಗೊಂಡಿಲ್ಲ ಎಂದು ಹೇಳುತ್ತಾರೆ. ಇ-ವೇ ಬಿಲ್ಲನ್ನು ಸರ್ಕಾರಿ ಪೋರ್ಟಲನಲ್ಲಿ ರೈಸ್ ಮಾಡಬೇಕು ಎಂದರೆ ಸರಿ. ಅವುಗಳನ್ನು ಹೆಚ್ಚಾಗಿ ಅವರವರೇ ಮಾಡುತ್ತಾರೆ, ಸಿ.ಎ. ರವರು ಕೆಲವು ಬಾರಿ ಮಾಡುತ್ತಾರೆ.

12. ಇ-ವೇ ಬಿಲ್ಲ ಮಾಡಲು ಟ್ರಾನ್ಸಪೋರ್ಟ ರ್ ಅಥವಾ ಅವರ ಕೆಚೇರಿ ಅಗತ್ಯ ಇರುವುದಿಲ್ಲ ಎಂದರೆ ಸರಿ. ನಾನು ಮಹಾಗಣಪತಿ ಟ್ರಾನ್ಸ್ಪೋರ್ಟನ ಮಾಲೀಕ. ನಾನು ಪಿ.ಯು.ಸಿ. ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಸಮಾರು 35 ವರ್ಷಗಳಿಂದ ಈ ಸಂಸ್ಥೆಯನ್ನು ನಾನು ನಡೆಸುತ್ತಿದ್ದೇನೆ. ದೂರುದಾರರು ನನಗೆ 25 ವರ್ಷಗಳಿಂದ ಪರಿಚಯ. ನಿಪಿ 35 ನ್ನು ದೂರುದಾರರು ನನಗೆ ಟೈಪ್ ಮಾಡಿ ಕೊಟ್ಟಿದ್ದು, ನಾನು ಸಹಿ ಮಾಡಿ, ಸೀಲ್ ಹಾಕಿ ನೀಡಿರುತ್ತೇನೆ ಎಂದರೆ ಸರಿ. ಇ-ವೇ ಬಿಲ್ಲಗಳು ಈಗಲೂ ಸಹಃ ಸರ್ಕಾರಿ ಪೋರ್ಟಲ್ ನಲ್ಲಿ ಕಂಡುಬರುತ್ತವೆ ಎಂದರೆ ಸಾಕ್ಷಿಯು ಹಳೆಯ ಬಿಲ್ಲಗಳನ್ನು ನೋಡಿ ಹೇಳಬೇಕು ಹಾಗಾಗಿ ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ ಎಂದು ಹೇಳುತ್ತಾರೆ.

13. ಟ್ರಾನ್ಸಪೋರ್ಟ ಮಾಡಲು ನಮಗೆ ಸರಕುಗಳನ್ನು ನೀಡಿದರೆ ಅವುಗಳ ಗುಣಮಟ್ಟವನ್ನು ನಾವು ಪರೀಕ್ಷೆ ಮಾಡುವುದಿಲ್ಲ. ದೂರುದಾರರಿಗೆ ಸಹಾಯ ಮಾಡಲು ನಿಪಿ 35ರ ಬಗ್ಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸರಕುಗಳನ್ನು ಸ್ವತಃ ಚಾಲನೆ ಮಾಡಿಕೊಂಡು ತೆಗೆದುಕೊಂಡು ಹೋಗಿರುವುದಿಲ್ಲ. ಎರಡು ಇ-ವೇ ಬಿಲ್ಲಗಳ ಸರಕುಗಳನ್ನು ಎರಡು ಲಾರಿಗಳ ಮೂಲಕ ತಿರಸ್ಕಾರ ಮಾಡಿ ಎರಡು ಲಾರಿಗಳನ್ನು ವಾಪಸ್ಸು ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಆರೋಪಿಯು ತಿರಸ್ಕಾರ ಮಾಡಿ ಪಾವಸ್ಸು ಕಳುಹಿಸಿದ್ದಾರೆ ಎಂದರೆ ಸಾಕ್ಷಿಯು ಇಲ್ಲ, ಒಂದು ವೇಳೆ ಆ ರೀತಿ ತಿರಸ್ಕಾರ ಮಾಡಿದ್ದರೆ ಇ-ವೇ ಬಿಲ್ಲ್ ರೈಸ ಮಾಡಿರಬೇಕು, ಇನವೈಸ್ ಇರಬೇಕು ಹಾಗೂ ಬಿಲ್ಟಿ ಕೊಟ್ಟಿರಬೇಕು ಎಂದು ಹೇಳಿರುತ್ತಾರೆ. ಆ ರೀತಿ ತಿರಸ್ಕಾರ ಮಾಡಿದ್ದರೆ ಡೆಬಿಟ್ ನೋಟನ್ನು ಸಹಃ ರೈಸ್ ಮಾಡಿರಬೇಕು ಎಂದರೆ ಸಾಕ್ಷಿಯು ಆ ರೀತಿ ಇದೂವರೆಗೂ ನಮಗೆ ಬಂದಿಲ್ಲ ಹಾಗಾಗಿ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಆ ರೀತಿ ಎರಡು ಟ್ರಕ್ ಲೋಡ ಸರಕುಗಳನ್ನು ಇ-ವೇ ಬಿಲ್ಲ್ ಮೂಲಕ ಆರೋಪಿಯು ತಿರಸ್ಕಾರ ಮಾಡಿ ವಾಪಸ್ಸು

ಕಳುಹಿಸಿದ್ದರು ನಾನು ಹಾಗೂ ದೂರುದಾರರು ಸೇರಿ ಆರೋಪಿಗೆ ಮೋಸ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

14. ಆ ರೀತಿ ಅಡಿಕೆ ಸರಕುಗಳನ್ನು ವಾಪಸ್ಸು ಕಳುಹಿಸಿರುವುದಕ್ಕೆ ಆರೋಪಿಯು ಡೆಬಿಟ್ ನೋಟನ್ನು ಸಹಃ ರೈಸ್ ಮಾಡಿದ್ದರು ಎಂದರೆ ಸಾಕ್ಷಿಯು ಇರಬಹುದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಸಹಿ/-

ಓ.ಹೇ.ಕೇ. ಸರಿ. ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ